## ತಹಸೀಲ್ದಾರ್‌ರವರ ಕಾರ್ಯಾಲಯ, ಕೃಷ್ಣರಾಜನಗರ ತಾಲ್ಲೂಕು

ಸಂಖ್ಯೆ:ಎಲ್‌ಎನ್‌ಡಿ:ಪಿಆರ್:101/10-11 ದಿನಾಂಕ:11.10.2010.

### ಅಧಿಕೃತ ಜ್ಞಾಪನ

ವಿಷಯ: ಕಂದಾಯ ಭೂಮಿಯನ್ನು ರಕ್ಷಿಸಲು ರಾಜ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪ್ರಾಧಿಕಾರವನ್ನು ರಚಿಸುವ ಬಗ್ಗೆ

ಉಲ್ಲೇಖ: 1) ಜಿಲ್ಲಾಧಿಕಾರಿಗಳು, ಮೈಸೂರು ರವರ ಕಾರ್ಯಾಲಯದ ಪತ್ರ ಸಂಖ್ಯೆ: ಎಲ್‌ಎನ್‌ಡಿ(1) ಒತ್ತುವರಿ:ಸಿಆರ್:11/10-11 ದಿ:28.06.2010.

2) ಅಧ್ಯಕ್ಷರು ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ಬೆಂಗಳೂರು ರವರ ಪತ್ರ ಸಿಟಿ:ಎಫ್:18/2009-10 ದಿ:21.06.10.

3) ಸರ್ಕಾರದ ಆದೇಶ ಸಂ:ಕಂಇ:82/ಎಜಿಕ್ಯೂ:99(ಪಿ1) ಬೆಂಗಳೂರು ದಿನಾಂಕ:13.11.2008.

***

ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖ (1)ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ ಇವರ ಪತ್ರದಲ್ಲಿ ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ಬೆಂಗಳೂರು ಹಾಗೂ ಸರ್ಕಾರದ ಆದೇಶದಂತೆ ಕಂದಾಯ ಭೂಮಿಯನ್ನು ರಕ್ಷಿಸಲು ತಾಲ್ಲೂಕು ಮಟ್ಟದ ಪ್ರಾಧಿಕಾರಗಳನ್ನು ರಚಿಸಲು ಆದೇಶಿಸಿರುತ್ತಾರೆ. ಅದರಂತೆ ತಾಲ್ಲೂಕು ಮಟ್ಟದ ಪ್ರಾಧಿಕಾರಿಗಳ ನಿಯತಕಾಲಿಕವಾಗಿ ಸಭೆ ಸೇರಿ ಆಗಿರುವ ಪ್ರಗತಿ ಬಗ್ಗೆ ಚರ್ಚಿಸಿ ಜಿಲ್ಲಾಧಿಕಾರಿಗಳ ಮೂಲಕ ಅಧ್ಯಕ್ಷರು ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ಬೆಂಗಳೂರು ರವರಿಗೆ ಸಭೆ ನಡವಳಿ ಹಾಗೂ ಪ್ರಗತಿ ವರದಿಯನ್ನು ಸಲ್ಲಿಸಬೇಕಾಗಿದೆ. ಹಾಗೂ ತಹಸೀಲ್ದಾರರು ತಾಲ್ಲೂಕು ಮಟ್ಟದ ಪ್ರಾಧಿಕಾರದ ಸಭೆಯನ್ನು ಇನ್ನುಮುಂದೆ ನಿಯತಕಾಲಿಕವಾಗಿ ಸಭೆ ಕರೆದು ಸಭೆ ನಡೆಸಿ ನಿರ್ಣಯ ಹಾಗೂ ಪ್ರಗತಿ ವರದಿಯನ್ನು ನಿಯತಕಾಲಿಕವಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕಾಗಿದೆ.

ಆದುದರಿಂದ ಕೆ.ಆರ್.ನಗರ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಸರ್ಕಾರಿ ಜಮೀನು ಸಂರಕ್ಷಣಾ ಪ್ರಾಧಿಕಾರವನ್ನು ಈ ಕೆಳಕಂಡಂತೆ ರಚಿಸಿ ಆದೇಶಿಸಿದೆ.

| | | |
|---|---|---|
| 1 | ತಹಸೀಲ್ದಾರರು | ಅಧ್ಯಕ್ಷರು |
| 2 | ವಲಯ ಅರಣ್ಯಾಧಿಕಾರಿಯವರು, ಕೆ.ಆರ್.ನಗರ | ಸದಸ್ಯರು |
| 3 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಕೆ.ಆರ್.ನಗರ | ,, |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾರಂಗಿ ನಾಲಾ ಉಪವಿಭಾಗ, ನಂ.5 ಕೆ.ಆರ್.ನಗರ | ,, |
| 5 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೆ.ಆರ್.ನಗರ | ,, |
| 6 | ತಾಲ್ಲೂಕು ಆರೋಗ್ಯಾಧಿಕಾರಿಗಳು ಕೆ.ಆರ್.ನಗರ | ,, |
| 7 | ಕಾರ್ಯನಿರ್ವಾಹಣಾಧಿಕಾರಿಗಳು, ಕೆ.ಆರ್.ನಗರ | ,, |

ಪ್ರಾಧಿಕಾರ ಈ ಕೆಳಕಂಡ ಅಂಡಗಳ ಕುರಿತು ಕಾರ್ಯನಿರ್ವಹಿಸತಕ್ಕದ್ದು,

1. ಸರ್ಕಾರಿ ಭೂಮಿಯ ಒತ್ತುವರಿಯನ್ನು ಪತ್ತೆಹಚ್ಚುವುದು
2. ಸರ್ಕಾರಿ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸಿ ತ್ರೈಮಾಸಿಕ ವರದಿಯನ್ನು ಸಲ್ಲಿಸುವುದು
3. ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 192(ಎ) ರಡಿಯಲ್ಲಿ ಅಪರಾಧ ಪ್ರಕರಣಗಳನ್ನು ದಾಖಲು ಮಾಡುವುದು.

ತಹಸೀಲ್ದಾರ್,
ಕೃಷ್ಣರಾಜನಗರ ತಾಲ್ಲೂಕು.